‘ಅದೆಲ್ಲ ಬೇಕಿಲ್ಲ. ನಿಮಗೆ ನನ್ನ ಮೇಲೆ ಒಲವಿಲ್ಲ, ಹಾಗಾಗಿ ಬರೆದಿಲ್ಲ... ನಿಮ್ಮ ಪ್ರೀತಿಯೆಲ್ಲ ನಾಟಕ’ ಎಂದು ಮಾತಿಗೆ ಷರಾ ಹಾಕಿದಳು.

‘ಅಯ್ಯೊ...! ಏನೇ ನಿನ್ನದು ಹೊಸ ವರಾತ... ಅದಕ್ಕೂ ಇದಕ್ಕೂ ಏನು ಸಂಬಂಧ?’

‘ಹಾಗಾದರೆ ಬರೀರಿ, ನನಗೋಸ್ಕರವಾಗಿಯಾದರೂ...’

‘ಮೊದಲೇ ಹೇಳಿರುವೆ, ಬಹಳ ಕಷ್ಟ ಕಣೆ, ಬರೆ ಅಂದ್ರೆ ಬೇಕಾದ್ರ ಶೃಂಗಾರ ಕಥೆ ಬರಿತೀನಿ... ನೋಡು ಬೇಕಾದ್ರೆ. ನಿನ್ನ ಗೆಳತಿಯರೆ ನನ್ನ ಬಂದು ಸುತ್ತುವರಿಬೇಕು’.

‘ಆಹಾಹಾ... ಎಂತಹ ಚಪಲ ನೋಡಿ. ಅಂತಹ ಆಲೋಚನೆ ಮಾಡಿದ್ರ ನಿಮ್ಮ ಕಣ್ಣು ಕಿತ್ತುಬಿಡುವೆ. ನಾನು ಕೇಳಿದ್ದು ಕಾವ್ಯ. ಅದು ಮೊದಲು ಬರೀರಿ ಅಷ್ಟೆ ಸಾಕು’ ಎಂದಳು.

‘ಅಯ್ಯೋ...? ದುರ್ವಿಧಿಯೇ!’

‘ನನ್ನ ಮೇಲೆ ನಿಮಗೆ ಪ್ರೀತಿ ಇಲ್ಲಂದಂಗಾತು. ಅವರು ಹೇಳಿದ್ದು ಪಕ್ಕಾ ಆಯಿತು’ ಎಂದು ಕಣ್ಣೀರು ತೆಗೆದಳು.

‘ಕರ್ಮ ಕರ್ಮ... ಬೇಡ, ಯೋಚಿಸು’ ಎಂದೆ.

‘ನೋ, ಇಟ್ಸ್ ಇಂಪಾಸಿಬಲ್’ ಎಂದು ಒಳಹೊಕ್ಕು ಬಾಗಿಲು ಹಾಕಿಕೊಂಡಳು.

ಎರಡು ದಿನ ಆಯ್ತು... ಮೂರು ದಿನ ಆಯ್ತು. ಮಾತಿಲ್ಲ, ಕತೆ ಇಲ್ಲ, ಮನೆ ತುಂಬಾ ಮೌನ.

ಬಂಗಾರ, ಬೆಳ್ಳಿ, ಸೀರೆ ಅಥವಾ ಯಾವುದಾದರೂ ಮನೆಗೆ ಬೇಕಾದ ಟೀವಿ, ಫ್ರಿಜ್, ವಾಷಿಂಗ್ ಮೆಷಿನ್ ಬಯಸಿ ಹಟ ಹಿಡಿದಿದ್ದರೆ, ಅದಕ್ಕಾಗಿ ಪ್ರತಿಭಟನೆ ಮಾಡಿದ್ದರೆ ಕೊಡಿಸಬಹುದಾಗಿತ್ತು, ತಂದುಕೊಡಬಹುದಾಗಿತ್ತು. ಈಕೆಯದು ವಿಚಿತ್ರ ಕೇಸ್...! ಕವಿತೆಗಾಗಿ ಮೌನ ಪ್ರತಿಭಟನೆ. ಕವಿತೆ–ಕಾವ್ಯ ಬರೆಯುವುದು ಕಷ್ಟ ಅಂತ ಗೊತ್ತಿತ್ತು. ಮೊದಲು ಬರೆದ ಎಲ್ಲವೂ ಸಂಪಾದಕರ ಅವಕೃಪೆಗೆ ಪಾತ್ರವಾಗಿ ಇವುಗಳನ್ನು ಪ್ರಕಟಿಸಲು ಸಾಧ್ಯವಿಲ್ಲ ಎನ್ನುವ ಒಕ್ಕಣೆಯೊಂದಿಗೆ ಮರಳಿ ಬಂದಿದ್ದವು. ಅಷ್ಟೆಲ್ಲ ಕರುಣೆ ಇಲ್ಲದೆ ತಿರಸ್ಕೃತ ಪತ್ರಗಳು ಬಂದ ಮೇಲೆ ಕಾವ್ಯದ ಮೇಲೆ ಆಸೆ ಇದ್ದರೂ ಗದ್ಯ ನನಗ ಯಾಕೋ ಸರಳವೆನಿಸಿ ಅದರ ಕೈ ಬಿಟ್ಟಿದ್ದೆ. ಮನೆಯ ಈ ಬಿರುಸಿನ ವಾತಾವರಣಕ್ಕಾದರೂ ಅನಿವಾರ್ಯ, ಮನಸ್ಸನ್ನು ಬದಲಿಸಬೇಕಾಯಿತು. ಗಟ್ಟಿ ನಿರ್ಧಾರ ಮಾಡಿ ದೊಡ್ಡವರೆಲ್ಲರ ಶ್ರೇಷ್ಠ ಯಾವ್ಯಾವೊ ಎಲ್ಲಾ ಕವನಸಂಕಲನ ಓದಿದೆ. ಅಧ್ಯಯನ ಮಾಡಿದೆ. ಅಂತೂ ಆರ್ಕಿಮಿಡಿಸ್‌ಗೆ ಸಾಕ್ಷೇಪ ಸಿದ್ಧಾಂತದ ಸಮಸ್ಯೆಗೆ ಉತ್ತರ ಸಿಕ್ಕ ಹಾಗೆ ನನಗೂ ಕಾವ್ಯದ ಜಾಡು ಸಿಕ್ಕಿತು. ಸುಂದರ ಕವಿತೆಯೊಂದು ಒಲಿಯಿತು, ಹಲವು ವರ್ಷಗಳ ತಪಸ್ಸಿನ ಫಲದಂತೆ.

ಬರೆದೆ, ತಿದ್ದಿದೆ. ಹೊಸತಾಗಿ ಕಂಡಿತು. ಇದುವರೆಗೂ ಬರೆದಕ್ಕಿಂತ ವಿಶೇಷವಾಗಿದೆ ಎನಿಸಿತು. ‘ನನ್ನ ಕೈಯೇನಾ ಇದು ಬರೆಸಿದ್ದು...!’ ಎಂದು ಪ್ರಶ್ನಿಸಿಕೊಂಡೆ. ಅಷ್ಟು ಸೊಗಸಾಗಿ ಮೂಡಿಬಂದಿತ್ತು. ಶೃಂಗಾರಮಯವಾಗಿ ರಮಣೀಯತೆ ಅದರಲ್ಲಿ ಹಾಸುಹೊಕ್ಕಾಗಿತ್ತು.

ಅಂತೂ ನನ್ನವಳ ಹಟದಿಂದಾದರೂ ಕಾವ್ಯ ಒಲಿಯಿತು, ಕವಿ ಎನಿಸಿಕೊಳ್ಳುವ ಭಾಗ್ಯ ದೊರೆಯಿತು ಎಂದು ಸಂತಸಪಟ್ಟೆ. ‘ನೀನು ಕವಿತೆ ಬರೆಯಬೇಡ, ನಿನಗೆ ಆ ಶಕ್ತಿ ಇಲ್ಲ’ ಎಂದವರ ಮುಖಕ್ಕೆ ಒಗೆಯಲು ಅನುಕೂಲವಾಯಿತು ಎಂದು ಏನೆಲ್ಲ ಖುಷಿಯಿಂದ ಓಡೋಡಿ ಅವಳ ಮುಂದೆ ಬಂದೆ.

ಉಬ್ಬಿದ ಮುಖ ಹಾಗೇ ಇತ್ತು. ಅರಳಿಸುವ ಅವಕಾಶ ದಕ್ಕಿತ್ತಲ್ಲ... ನಾನು ಮನಸ್ಸಿನ ಭಾವನೆ ಹೇಳುವ ಮೊದಲೇ ‘ಏನು ಬಂದಿದ್ದು...?’ ಬಂತು ಅವಳಿಂದ ಪ್ರಶ್ನೆ.

‘ಅದೇ ಕಣೆ. ವಾರಗಟ್ಟಲೆ ಕಷ್ಟಪಟ್ಟು ನಿನಗಾಗಿ ಕಾವ್ಯ ಬರೆದುಕೊಂಡು ಬಂದಿದ್ದೇನೆ. ನೀನೋ ಏನೂ ಉತ್ಸುಕತೆ ಇಲ್ಲದೆ ಏನು ಬಂದಿದ್ದು? ಅಂತ ಕೇಳ್ತೀಯಲ್ಲೆ’ ಎಂದೆ ಬೇಜಾರು ಮಾಡಿಕೊಂಡು.

ಖುಷಿಯಿಂದ ‘ಹೌದಾ...! ಕಾವ್ಯ ಬರೆದರಾ...? ಆ ಬಿನ್ನಾಣಗಿತ್ತೇರಿಗೆ ಇವತ್ತು ನಿಮ್ಮ ಕವಿತೆ ಓದಿ ತೋರಸ್ತೀನಿ. ಏನಂತ ತಿಳಕೊಂಡರಾ ನನ್ನನ್ನು?’ ಎಂದು ಸಂಭ್ರಮಿಸಿ ಓದಲು ಹೇಳಿದಳು.

ನಾನು ಭಾವನಾತ್ಮಕ ಕಾವ್ಯ ಓದಿದೆ.

ಓದುತ್ತಾ ಓದುತ್ತಾ ಹೋದಂತೆ ನನ್ನವಳ ಕೆನ್ನೆ ಕೆಂಪೇರತೊಡಗಿತು. ನಾಚಿ ನೀರಾದಳು.

ನನಗೂ ಕಳೆದುಕೊಂಡ ಒಲವನ್ನು ಮತ್ತೆ ಪಡೆದ ಖುಷಿ. ಖುಷಿಯಿಂದ ಮತ್ತೆ ಓದಲಾರಂಭಿಸಿದೆ. ಹಾಗೆ ಓದುತ್ತಾ ಓದುತ್ತ ಹೋಗಿ ಮುಗಿಸಿ ಅವಳ ಮುಖ ನೋಡಿದೆ. ಕಣ್ಣು ಕೆಂಪಾಗಿತ್ತು. ಆರಂಭದಲ್ಲಿ ಇದ್ದ ಮುಖಕಾಂತಿ ಇಲ್ಲದಾಗಿತ್ತು.

‘ಏನ್ರಿ ಇದು?’ ಎಂದಳು

‘ಕಾವ್ಯ...’

‘ಯಾರ್‍ರೀ ಅವಳು?’

‘ಅದೇ ಕಾವ್ಯ?‘

‘ಅದೇರಿ... ಯಾರ್‍ರೀ ಅವಳು?’

‘ನನಗ ಅರ್ಥ ಆಗಲಿಲ್ಲ?’ ಎಂದೆ.

‘ನನಗೆಲ್ಲ ಅರ್ಥ ಆಯಿತು... ಯಾರಾಕಿ ಕಾವ್ಯ? ಎಲ್ಲಿದ್ದಾಳೆ? ಎಷ್ಟು ದಿನದಿಂದ ನನಗೆ ಗೊತ್ತಿಲ್ಲದೆ ನಡೆಸಿದ್ದೀರಿ? ಅಯ್ಯೋ ನಾನು ಮೋಸ ಹೋದೆ...’ ಎಂದು ಸಿಟ್ಟಿನಿಂದ ಬೆಡ್ ರೂಮೊಳಗೆ ಹೊಕ್ಕು ಬಾಗಿಲು ಮುಚ್ಚಿಕೊಂಡಳು.

ಈಗ ಹಲವು ದಿನ ಆಯ್ತು. ಪದ್ಯಾನೂ ಇಲ್ಲ, ಗದ್ಯವೂ ಇಲ್ಲ. ಜೊತೆಗೆ ನನಗೆ ನಿದ್ದೇನೂ.

ಕಾವ್ಯ ಓದಿದ ದಿನದಿಂದ ಮನೆಯಲ್ಲಿ ಆಗಾಗ ಭೂಕಂಪ–ಸುನಾಮಿ.

ಎಷ್ಟೇ ಸಮಜಾಯಿಷಿ ನೀಡಿ ಸಮಾಧಾನಿಸಿದರೂ ಅವಳು ಬಿಟ್ಟಿಲ್ಲ– ‘ಯಾರ್‍ರೀ ಅವಳು?’ ಎಂದು ಕೇಳುವುದು.

ನಡುರಾತ್ರಿ ಬೆಚ್ಚಿ ಬಿದ್ದು, ಎದ್ದು ಎಬ್ಬಿಸಿ ‘ಗೊಳೋ’ ಅಂತ ಅತ್ತು ಕೇಳುತಿರುತ್ತಾಳೆ – ‘ಯಾರ್‍ರೀ ಅವಳು?’



ಪ್ರತಿಕ್ರಿಯಿಸಿ: **feedback@sudha.co.in**